# ಕನ್ನಡ ಭಾಷೆಯ ಕೊಡುಗೆ ವಿಶ್ವ ಸಾಹಿತ್ಯದೆಡೆಗೆ

ವಿ. ವಾಯ್. ಪಾಟೀಲ

ಉಪನ್ಯಾಸಕರು, ಕನ್ನಡ ವಿಭಾಗ, ಜೆ.ಎಸ್.ಎಸ್. ಸಂಸ್ಥೆಯ ಎಸ್. ಟಿ. ಸಿ. ಕಲಾ ಮತ್ತು ವಾಣಿಜ್ಯ ಮಹಾವಿದ್ಯಾಲಯ, ಬನಹಟ್ಟಿ.

DOI: https://doi.org/10.5281/zenodo.17297671

## ABSTRACT:

ಪ್ರಪಂಚದಲ್ಲಿರುವ ಪ್ರತಿ ಪ್ರದೇಶಗಳ ಜನರ ಜೀವನ, ರೀತಿ-ನೀತಿ, ವಿಚಾರ ತಿಳಿಯಬೇಕಾದರೆ, ಅಲ್ಲಿ ಬಳಸಲ್ಪಡುವ ಭಾಷೆ ಮುಖ್ಯವಾಗಿರುತ್ತದೆ. ಆ ಭಾಷೆಯಲ್ಲಿ ರಚಿತವಾದ ಸಾಹಿತ್ಯದ ಮೂಲಕ ಅಲ್ಲಿನ ಜನರ ಸಂಸ್ಕೃತಿ, ಪ್ರಗತಿ, ವಿಚಾರಧಾರೆಗಳು ಮೂಡಿಬರುತ್ತವೆ. "ನಾಲಗೆ ತನ್ನ ಕುಲವನ್ನು ಅರುಹುತ್ತದೆ" ಎಂಬ ಮಾತಿನಂತೆ, "ಒಂದು ಭಾಷೆ ಅಲ್ಲಿನ ಜನರ ಭಾವನೆ, ಆಚಾರ, ವಿಚಾರ, ಸಂಪ್ರದಾಯ, ಸಂಸ್ಕೃತಿಗಳನ್ನು ತಿಳಿಸುತ್ತದೆ. ಅದರಂತೆ ಕನ್ನಡವೂ ಒಂದು ಪ್ರಬುದ್ಧ ಭಾಷೆಯಾಗಿದೆ. ಕನ್ನಡ ಭಾಷೆ ಕರ್ನಾಟಕದ ಜನತೆಯ ಜೀವನಾಡಿಯಾಗಿ, ಸರ್ಕಾರದ ಆಡಳಿತ ಭಾಷೆಯಾಗಿ ಬಳಕೆಯಾಗುತ್ತಿದೆ. ಕನ್ನಡ ಭಾಷೆ ಕರ್ನಾಟಕದ ಜನರ ದೈನಂದಿನ ಬದುಕಿನ ಅವಿಭಾಜ್ಯ ಅಂಗವಾಗಿದ್ದು, ಅವರ ವಿಶಿಷ್ಟ ಸಂಸ್ಕೃತಿ, ಪರಂಪರೆ, ನೃತ್ಯ, ಸಂಗೀತ, ಕಲೆ ಇತ್ಯಾದಿಗಳನ್ನು ಸಂರಕ್ಷಿಸಿ, ವ್ಯಕ್ತಪಡಿಸುವ, ಆ ಮೂಲಕ ಮುಂದಿನ ಜನಾಂಗಕ್ಕೆ ಒದಗಿಸುವ ಜವಾಬ್ದಾರಿಯನ್ನು ಆ ಭಾಷೆಯ ಸಾಹಿತ್ಯ ಹೊಂದಿರುತ್ತದೆ. ಅದರಂತೆ ಕನ್ನಡ ಭಾಷೆಗೆ ಸುಮಾರು 1500 ವರ್ಷಗಳ ಸಾಹಿತ್ಯಿಕ ಚರಿತ್ರೆ ಇದೆ. ಈ ಅಗಾಧ ಚರಿತ್ರೆಯಲ್ಲಿ ಆಗಿಹೋದ ಶ್ರೇಷ್ಠ ಕವಿಗಳು, ಅವರ ಸಾಹಿತ್ಯ ಅಧ್ಯಯನ ಮಾಡುವುದು ಅತ್ಯಗತ್ಯವಾಗಿದೆ. ಕನ್ನಡ ಭಾಷೆ ಮತ್ತು ಸಾಹಿತ್ಯ, ತನ್ನ ಚರಿತ್ರೆ ಹಾಗೂ ವೈಶಿಷ್ಟ್ಯತೆಯಿಂದ ರಾಷ್ಟ್ರಮಟ್ಟದಲ್ಲಿ ಪ್ರಖ್ಯಾತವಾಗಿದ್ದು, ರಾಷ್ಟ್ರ ನಿರ್ಮಾಣಕ್ಕೆ ತನ್ನದೇ ಆದ ಕೊಡುಗೆ ನೀಡುತ್ತಿರುವುದು ಶ್ಲಾಘನೀಯವಾಗಿದೆ. ಆ ದಿಶೆಯಲ್ಲಿ ಕನ್ನಡದಲ್ಲಿ ಮೂಡಿಬಂದ ಸಾಹಿತ್ಯ ವಿಶ್ವಕ್ಕೆ ವಿಶೇಷವಾದ ಸಂದೇಶ ನೀಡುತ್ತದೆ.

## KEYWORDS:

ಶ್ರೀವಿಜಯನ ಕವಿರಾಜಮಾರ್ಗ, ಆದಿಕವಿ ಪಂಪ, ಬಸವಣ್ಣನವರ ವಚನಗಳು, ಸರ್ವಜ್ಞ, ತ್ರಿಪದಿ ಸಾಹಿತ್ಯ, ಮಹಾಕವಿ ಕುವೆಂಪು.

**ಪೀಠಿಕೆ:**

ಲೇಖನದ ಶೀರ್ಷಿಕೆಯಲ್ಲಿರುವಂತೆ ಕನ್ನಡ ಭಾಷೆಯ ಕೊಡುಗೆ ಎನ್ನುವಲ್ಲಿ ಕನ್ನಡ, ಭಾಷೆ, ಕೊಡುಗೆ ಇವುಗಳ ಅರ್ಥವೂ ವಿಶಿಷ್ಟವಾಗಿದೆ. ಕನ್ನಡ ಎಂದರೆ ಕರ್ನಾಟಕ ನಾಡು, ನಾಡಿನ ಜನರು, ಅವರ ಸಂಸ್ಕೃತಿ ಇತ್ಯಾದಿ ಅರ್ಥ ಬರುತ್ತವೆ. ಭಾಷೆ ಎಂದಾಗ ಆ ನಾಡಿನ ಜನರು ಪರಸ್ಪರ ವ್ಯವಹಾರಕ್ಕಾಗಿ ಬಳಸುವ ಧ್ವನಿ ಸಂಕೇತಗಳ ವ್ಯವಸ್ಥೆ. ಹಾಗೆಯೇ ಕೊಡುಗೆ ಎಂದಾಗ ಆ ಭಾಷೆಯಲ್ಲಿನ ಸಾಹಿತ್ಯದ ಮೂಲಕ ಜಗತ್ತಿಗೆ ಕೊಡಮಾಡುವ ವಿಶಿಷ್ಟ ವಿಚಾರಧಾರೆಗಳು ಎಂಬರ್ಥ ಮೂಡಿಬರುತ್ತದೆ. ಕನ್ನಡ ಭಾಷೆ ಬಹು ಪ್ರಾಚೀನವಾದುದು, ಸತ್ವಯುತವಾದುದು. ಇಂತಿರುವ ಕನ್ನಡ ಭಾಷೆ, ಕವಿಗಳು, ಅವರ ಸಾಹಿತ್ಯ, ಅದರ ಮೂಲಕ ನಾಡಿಗೆ ನೀಡಿದ ಕೊಡುಗೆ, ದೇಶಕ್ಕೆ ಸಲ್ಲಿಸಿದ ಗೌರವ ವಿಶ್ವ ಸಾಹಿತ್ಯಕ್ಕೆ ಮಾದರಿಯಾದುದು. ಅಂತಹ ಕನ್ನಡ ಭಾಷೆಯ ವೈಶಿಷ್ಟ್ಯತೆಯನ್ನು, ಹಿರಿಮೆ-ಗರಿಮೆಯನ್ನು ಹಲವಾರು ಕವಿಗಳು ತಮ್ಮ ಕಾವ್ಯಗಳ ಮೂಲಕ ಹಾಡಿ ಹೊಗಳಿದ್ದಾರೆ. ಕನ್ನಡ ನಾಡಿನ ಶ್ರೇಷ್ಠ ಕವಿಗಳು ಅವರ

ಕಾವ್ಯಗಳ ಸಾರವನ್ನಾಧರಿಸಿ ಅರ್ಥೈಸಿಕೊಂಡಾಗ ಕನ್ನಡ ಭಾಷೆಯ ಕೊಡುಗೆ ಸಂಪೂರ್ಣವಾಗಿ ಮನದಟ್ಟಾಗುತ್ತದೆ.

**ಶ್ರೀವಿಜಯನ – ಕವಿರಾಜಮಾರ್ಗ:**

ಶ್ರೀವಿಜಯನಿಂದ ರಚಿತವಾದ "ಕವಿರಾಜಮಾರ್ಗ" ಎಂಬ ಕೃತಿಯು ಇದುವರೆಗೆ ದೊರೆತಿರುವ ಕನ್ನಡ ಕೃತಿಗಳಲ್ಲಿ ಮೊದಲ ಗ್ರಂಥವಾಗಿದ್ದು, ಕನ್ನಡದ ಮೊದಲ ಲಕ್ಷಣ ಗ್ರಂಥವಾಗಿದೆ. ಇದರಲ್ಲಿ ಮೂರು ಅಧ್ಯಾಯಗಳಿದ್ದು, ಎರಡನೆಯ ಹಾಗೂ ಮೂರನೆಯ ಅಧ್ಯಾಯಗಳಲ್ಲಿ ಕ್ರಮವಾಗಿ ಶಬ್ದಾಲಂಕಾರ ಮತ್ತು ಅರ್ಥಾಲಂಕಾರಗಳ ಪ್ರಸ್ತಾಪವಿದ್ದರೆ, ಮೊದಲ ಅಧ್ಯಾಯದಲ್ಲಿ ಕಾವ್ಯದೋಷ, ಕನ್ನಡ ನಾಡಿನ ವಿಸ್ತಾರ, ಕನ್ನಡಿಗರ ಗುಣ–ಸ್ವಭಾವ ಚಿತ್ರಣ, ನಾಡು–ನುಡಿ, ಸಾಹಿತ್ಯ, ಸಂಸ್ಕೃತಿಯ ಚಿಂತನೆಗಳಿವೆ.

**ಸುಭಟರ್ಕಳ್ ಕವಿಗಳ್ ಸು**
**ಪ್ರಭುಗಳ್ ಚೆಲ್ವರ್ಕಳಭಿಜನರ್ಕಳ್ ಗುಣಿಗಳ್**
**ಅಭಿಮಾನಿಗಳತ್ಯುಗ್ರರ್**
**ಗಭೀರಚಿತ್ತರ್ ವಿವೇಕಿಗಳ್ ನಾಡವರ್ಗಳ್**

ಎನ್ನುವ ಪದ್ಯದಲ್ಲಿ ಈ ನಾಡಿನ ಜನ, ಒಳ್ಳೆಯ ಯೋಧರು, ಕವಿಗಳು, ಒಳ್ಳೆಯ ಪ್ರಭುಗಳು, ಸುಂದರರು, ಶಿಷ್ಟರು, ಗುಣವಂತರು, ಅಭಿಮಾನಿಗಳು, ಅತ್ಯುಗ್ರರು, ಗಂಭೀರಚಿತ್ತರು ಮತ್ತು ವಿವೇಕಿಗಳು ಆಗಿದ್ದರು ಎಂದು ಕನ್ನಡ ನಾಡಿನ ಜನರ ವಿಶ್ಲೇಷಣೆಗಳನ್ನು ಶ್ರೀವಿಜಯನು ಮನದುಂಬಿ ಬಣ್ಣಿಸಿದ್ದಾನೆ. ಅಂದರೆ ಕನ್ನಡ ನಾಡಿನಲ್ಲಿ ಇಂಥ ಶ್ರೇಷ್ಠ ವ್ಯಕ್ತಿಗಳು ಇದ್ದರು. ಅವರು ಎಲ್ಲ ವಿಷಯದಲ್ಲೂ ಶ್ರೇಷ್ಠರಾಗಿದ್ದರು. ಜೊತೆಗೆ ನಮ್ಮ ನಾಡು ಅಂತವರಿಗೆ ಆಶ್ರಯ ಸ್ಥಾನವಾಗಿತ್ತು ಎಂದು ವರ್ಣಿಸಿರುವುದು ಕರ್ನಾಟಕದ ಹಿರಿಮೆಯಾದರೆ, ಅದು ಭಾರತದ ಒಂದು ರಾಜ್ಯ ಎನ್ನುವುದು ದೇಶಕ್ಕೆ ಒಂದು ಗರಿಮೆಯಾಗಿದೆ.

**ಮಹಾಕವಿ ಪಂಪ:**

ಕನ್ನಡದ ಆದಿಕವಿ ಎಂದು ಖ್ಯಾತನಾದ ಪಂಪನಿಂದ ಕನ್ನಡ ಸಾಹಿತ್ಯ ಚರಿತ್ರೆಗೆ ಒಂದು ವಿಶೇಷ ಮಹತ್ವ ಬಂದಿದೆ. ಪಂಪನು "ಆದಿಪುರಾಣ" ವೆಂಬ ಧಾರ್ಮಿಕ ಕಾವ್ಯವನ್ನು ಹಾಗೂ "ವಿಕ್ರಮಾರ್ಜುನ ವಿಜಯ" ವೆಂಬ ಲೌಕಿಕ ಕಾವ್ಯವನ್ನು ನೀಡಿ ಮುಂಬರುವ ಕವಿಗಳಿಗೆ ಮಾದರಿಯಾಗಿದ್ದಾನೆ. ಪಂಪನು ಸಂಸ್ಕೃತ ಮಹಾಭಾರತವನ್ನು ಕನ್ನಡ "ವಿಕ್ರಮಾರ್ಜುನ ವಿಜಯ" ಅಥವಾ "ಸಮಸ್ತ ಭಾರತ" ಮಾಡುವಾಗ ಆ ಕಥೆಯಲ್ಲಿ ಧರ್ಮ ಹೆಣೆದುಕೊಂಡಿದೆಯೆನ್ನುವುದನ್ನು ಸ್ವಲ್ಪ ದೂರಾನ್ವಯದ ಮಾತಾದರೇನು? ಅವನು ತನ್ನ ಆ "ಸಮಸ್ತ ಭಾರತ"ದಲ್ಲಿ ಅರ್ಜುನನ ಪಾತ್ರದೊಡನೆ ಅರಿಕೇಸರಿ ಪಾತ್ರವನ್ನು ಸಮೀಕರಿಸುವ ತಂತ್ರವನ್ನು ಅಳವಡಿಸಿಕೊಳ್ಳುವ ಮೂಲಕ ಆ ಹತ್ತನೆಯ ಶತಮಾನದ ಭಾರತದ ರಾಜಕೀಯ ಚರಿತ್ರೆಯ ಮತ್ತು ಸಾಂಸ್ಕೃತಿಕ ಪರಿಸ್ಥಿತಿಯ ಒಂದು ಪಾರ್ಶ್ವ ನೋಟವನ್ನೂ ಒದಗಿಸಿ, ಆ ಮೂಲಕ ಒಂದು ವಿನೂತನ ಪ್ರಕಾರದ ಕಾವ್ಯದ ಪ್ರವರ್ತನೆಗೇ ಕರ್ತಾರನಾದನು. ಕನ್ನಡದಲ್ಲಿ ಪಂಪನ ಕಾವ್ಯಶಕ್ತಿ ಅಸದೃಶ್ಯವಾದುದು. (ಪಂಪನ ಆದಿಪುರಾಣ ಕಥಾಮೃತ – ಡಾ. ಎಲ್. ಬಸವರಾಜು, ಪು ಸಂ 8). ಹೀಗೆ ಆದಿಕವಿ ಪಂಪನಿಂದ ಕನ್ನಡ ಸಾಹಿತ್ಯದಲ್ಲಿ ಪ್ರಭುತ್ವ ರಾಷ್ಟ್ರೀಯತೆಯ ಮನೋಧರ್ಮ ಮೂಡಿಬಂದುದು ಕನ್ನಡ ಭಾಷೆಯ ಹಿರಿಮೆಯಾಗಿದೆ.

**ಚಾಗದ ಭೋಗದಕ್ಕರದ ಗೇಯದ ಗೊಟ್ಟಿಯ ಲಂಪಿನಿಂದಮುಗ**
**ಳ್ಗಾಗರಮಾದ ಮಾನಸರೆ ಮಾನಸರಂತವರಾಗಿ ಪುಟ್ಟಲೇ**

**ನಾಗಿಯು ಮೇನೋ ತೀರ್ದಪುದೆ ತೀರದೊಡಂ**
**ಮರಿದುಂಬಿಯಾಗಿ ಮೇಣ್ ಕೋಗಿಲೆಯಾಗಿ**
**ಪುಟ್ಟುವುದು ನಂದನದೊಳ್ ಬನವಾಸಿ ದೇಶದೊಳ್**
**– (ನಾಡೋಜ ಪಂಪ, ಸಂ– ಎಂ. ಕೇಶವ ಭಟ್ಟ).**

ಕನ್ನಡ ನಾಡಿನ ಬನವಾಸಿ ಪ್ರದೇಶದಲ್ಲಿ ಕಾಲ ಕಳೆದ ಪಂಪನು ಕನ್ನಡಿಗರ ತ್ಯಾಗ, ಭೋಗ, ಅವರು ವಿವಿಧ ಗೋಷ್ಠಿಗಳಲ್ಲಿ ಭಾಗವಹಿಸುವ ಪರಿಯನ್ನು ಕಂಡು, ಆ ರೀತಿಯಲ್ಲಿರುವ ಮನುಷ್ಯರೇ ನಿಜವಾದ ಮನುಷ್ಯರು. ತಾನು ಸಹ ಮತ್ತೆ ಮನುಷ್ಯನಾಗಿ ಇಂತಹ ಕನ್ನಡ ನಾಡಿನಲ್ಲಿಯೇ ಹುಟ್ಟಿ ಬರಬೇಕೆಂದು ಅಪೇಕ್ಷಿಸುತ್ತಾನೆ. ಒಂದು ವೇಳೆ ಮನುಷ್ಯ ಭವದಲ್ಲಿ ಹುಟ್ಟಿ ಬರಲು ಸಾಧ್ಯವಾಗದೇ ಹೋದರೆ ಇಲ್ಲಿಯ ಪ್ರಕೃತಿ ಸೌಂದರ್ಯವನ್ನು ಸವಿಯುವುದಕ್ಕಾಗಿ ಮರಿದುಂಬಿಯಾಗಿ ಅಥವಾ ಕೋಗಿಲೆಯಾಗಿಯಾದರೂ ಹುಟ್ಟಿ ಬರಲು ಇಚ್ಛಿಸುತ್ತೇನೆ ಎಂಬ ಮನದ ಬಯಕೆಯನ್ನು ವ್ಯಕ್ತಪಡಿಸಿದ್ದಾನೆ. ಇದು ಕವಿ ಹೊಂದಿರುವ ನಾಡ ಪ್ರೇಮವಾಗಿದ್ದು, ದೇಶ ಪ್ರೇಮಕ್ಕೆ ಪ್ರೇರಣೆಯಾಗುತ್ತದೆ.

**ಬಸವಣ್ಣನವರ ವಚನ ಸಾಹಿತ್ಯ:**

12 ನೇ ಶತಮಾನದ ಶಿವಶರಣರು ಸತ್ಯ ನಿಷ್ಠುರ ಹಾಗೂ ಶ್ರಮಜೀವಿಗಳಾಗಿದ್ದರು. ತಾವು ನುಡಿದಂತೆ ನಡೆಯುವವರಾಗಿದ್ದರು, ನಡೆದಂತೆ ನುಡಿವವರಾಗಿದ್ದರು. ದೇವರು, ಧರ್ಮ, ಸಾಮಾಜಿಕ ಪರಿಸರ ಅಷ್ಟೇ ಅಲ್ಲದೆ, ಸ್ವತಃ ತಮ್ಮನ್ನೇ ವಸ್ತುನಿಷ್ಠವಾಗಿ ವಿಮರ್ಶಿಸಿಕೊಳ್ಳುವ ಧೈರ್ಯವಂತರಾಗಿದ್ದರು. ಇಂತಹ ವಿಮರ್ಶೆ ಒಮ್ಮೊಮ್ಮೆ ವೈಯಕ್ತಿಕವಾಗಿ ಮತ್ತೊಮ್ಮೆ ಸಾಮೂಹಿಕವಾಗಿ ಶಿವಾನುಭವ ಗೋಷ್ಠಿಗಳಲ್ಲಿ ನಡೆಯುತ್ತಿತ್ತು. ಇಲ್ಲಿ ಲಿಂಗ ತಾರತಮ್ಯವಿಲ್ಲ, ಮೇಲು–ಕೀಳುಗಳಿಲ್ಲ, ಜಾತಿ–ಭೇದಗಳಿಲ್ಲ, ವೈಚಾರಿಕತೆಗೆ ಮಹತ್ವ ಕೊಟ್ಟು ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದರು. ಅಂತವುಗಳೇ ವಚನಗಳಾಗಿ ಜನರ ಉನ್ನತ ಬದುಕಿಗೆ ದಾರಿದೀಪವಾಗಿವೆ. ಇವರು ಸತ್ಯ ಶುದ್ಧ ಕಾಯಕ, ಪ್ರಸಾದ, ದಾಸೋಹ ಇತ್ಯಾದಿ ಅಂಶಗಳನ್ನು ಇಟ್ಟುಕೊಂಡು ತಮ್ಮ ವಚನ ರಚನೆಯಲ್ಲಿ ಜನರಿಗೆ ಉಪದೇಶ ನೀಡಿದ್ದಾರೆ.

**ಕೊಲ್ಲುವವನೇ ಮಾದಿಗನು ಹೊಲಸು ತಿಂಬುವವನೇ ಹೊಲೆಯ**
**ಕುಲವೇನೋ ಆವಂದಿರ ಕುಲವೇನೋ**
**ಸಕಲ ಜೀವಾತ್ಮರಿಗೆ ಲೇಸನೇ ಬಯಸುವ**
**ನಮ್ಮ ಕೂಡಲಸಂಗನ ಶರಣರೇ ಕುಲಜರು.**

ಪ್ರತಿಯೊಬ್ಬ ವ್ಯಕ್ತಿಯು ತನ್ನ ನಡೆ–ನುಡಿಗಳಿಂದ ಶುದ್ಧನಾಗಿರಬೇಕು ಹೊರತಾಗಿ ಹುಟ್ಟಿನಿಂದ ಜಾತಿಯನ್ನು ನಿರ್ಧರಿಸಬಾರದು. ಹುಟ್ಟಿನಿಂದ ಎಲ್ಲರೂ ಶ್ರೇಷ್ಠರೇ, ಆದರೆ ಸಾಮಾಜಿಕ ಕಟ್ಟಳೆಗಳಿಂದ ಅವರನ್ನು ಆ ಜಾತಿ, ಈ ಜಾತಿ ಎಂದು ಹೀಯಾಳಿಸುತ್ತೇವೆ. ಆದರೆ ಅವನು ಮಾಡುವ ಕಾರ್ಯಗಳು ಅವನ ಜಾತಿಯನ್ನು ಸೂಚಿಸುತ್ತವೆ ಎಂದು ಸೂಚ್ಯವಾಗಿ ತಿಳಿಸುತ್ತಾ, ಜಗತ್ತಿನಲ್ಲಿನ ಸಕಲ ಜೀವಾತ್ಮರಿಗೆ ಒಳ್ಳೆಯದನ್ನು ಬಯಸುವ ಜನರೇ ನಿಜವಾದ ಶರಣರು ಎಂದು ಪ್ರತಿಪಾದಿಸಿ ಜಾತಿಯ ಭೂತವನ್ನು ಓಡಿಸಿದವರು ವಿಶ್ವಗುರು ಬಸವಣ್ಣನವರು. ಆದರ್ಶ ಬದುಕಿನ ತಿರುಳನ್ನು ತಿಳಿಸುವಾಗ ಅಣ್ಣ ಬಸವಣ್ಣನವರು ನುಡಿಗಿಂತ ನಡೆಗೆ ಹೆಚ್ಚು ಸ್ಥಾನ ನೀಡಿದ್ದರು. ''ನಡೆ ನುಡಿ ಒಂದಾದೊಡೆ ಇದೇ ಜನ್ಮ ಕಡೆ'' ಎಂದು ಸಾರಿದರು. ಇದು ಸಾಮಾಜಿಕ ಬಾಳಿನಲ್ಲಿ ಒಂದೆಡೆ ಅನಾಚಾರ, ಅತ್ಯಾಚಾರ, ಅನ್ಯಾಯ ಮಾಡುವುದು, ಇನ್ನೊಂದೆಡೆ ಸಾತ್ವಿಕ, ವಿವೇಕದ ಮಾತಿನ ಸುರಿಮಳೆ ಸುರಿಸುವುದು ಸರಿಯಲ್ಲವೆಂದರು. ಮಾತಿಗೂ ಕೃತಿಗೂ ತಾಳಮೇಳವಿಲ್ಲದೆ ಇಂದು ಅಶಾಂತಿಯ ಬದುಕು ನಮ್ಮದಾಗಿದೆ. ಅಣ್ಣನ ಹಾದಿ ತಪ್ಪಿದ್ದೆ ನಮ್ಮ ದುಃಖಕ್ಕೆ ಕಾರಣವಾಗಿದೆ ಎಂದು ತಿಳಿಯಬೇಕಾಗಿದೆ.

**ದೇವಲೋಕ ಮರ್ತ್ಯಲೋಕ ಬೇರಿಲ್ಲ ಕಾಣಿರೋ**
**ಸತ್ಯ ನುಡಿಯುವುದೇ ದೇವಲೋಕ**
**ಮಿಥ್ಯ ನುಡಿಯುವುದೇ ಮರ್ತ್ಯಲೋಕ**
**ಆಚಾರವೇ ಸ್ವರ್ಗ ಅನಾಚಾರವೇ ನರಕ**
**ಇದಕ್ಕೆ ನೀವೇ ಪ್ರಮಾಣ ಕೂಡಲಸಂಗಮದೇವ.**

ಮಾನವ ತನ್ನ ಬದುಕಿನಲ್ಲಿ ಹೇಗೇಗೋ ನಡೆದುಕೊಂಡು ಬರೀ ಸುಳ್ಳಿನ ಸಂತೆಯಲ್ಲಿ ತಿರುಗಾಡಿ ಸುಳ್ಳನ್ನೇ ಕೊಡುಕೊಳ್ಳುವ ವಸ್ತುವಾಗಿಸಿ ಸುಳ್ಳಿನ ಆಸ್ತಿಯನ್ನೇ ಅಪಾರವಾಗಿ ಮಾಡಿಕೊಂಡು ಕೂತರೆ ಫಲವೇನು? ಜೊತೆಗೆ ಆಚಾರವಂತನಾಗಿ ಬದುಕಬೇಕು ಹಾಗೆ ಬದುಕಿದರೆ ಅದು ತಾವಿರುವಲ್ಲಿಯೇ ಸ್ವರ್ಗವಿದ್ದಂತೆ, ಹಾಗೆ ಬದುಕದೆ ಅನಾಚಾರ ಮಾಡುತ್ತಾ ಸುಳ್ಳು ಮಾತನಾಡುತ್ತಾ ಬದುಕುವುದು ಏನೂ ಪ್ರಯೋಜನವಿಲ್ಲ. ಹೀಗೆ ಬದುಕುವವರು ಮುಂದೆ ದೇವಲೋಕ ಸೇರುತ್ತಾರೆಯೇ? ಮಾನವನಿಗೆ ಸ್ವರ್ಗ, ನರಕಗಳು ಭೂಮಿಯ ಮೇಲೆ ಇವೆ. ಅವನ್ನು ಬದುಕಿನಲ್ಲಿಯೇ ನಮ್ಮ ಗುಣ–ಸ್ವಭಾವಕ್ಕೆ ಅನುಗುಣವಾಗಿ ಅನುಭವಿಸಬೇಕಾಗಿದೆ ಎಂದು ಸಮಾಜಕ್ಕೆ ಬೋಧಿಸಿದರು. ಮಾನವನು ಆಡುವ ಮಾತು ಮತ್ತೊಬ್ಬರಿಗೆ ನೋವನ್ನುಂಟು ಮಾಡಬಾರದು. ಮಾತನಾಡುವ ಮನುಷ್ಯರೆಲ್ಲರ ನಾಲಿಗೆಯು ಒಂದೇ, ಆದರೆ ಅದನ್ನೇ ಯಾವ ರೀತಿ ಬಳಸಿದರೆ ಎಲ್ಲರಿಗೂ ಹಿತವಾಗುತ್ತದೆ ಎಂಬುದನ್ನು ಬಹಳ ಸೂಕ್ಷ್ಮವಾಗಿ, ಸೂಕ್ತವಾಗಿ ಬಸವಣ್ಣನವರು ತಮ್ಮ ವಚನಗಳಲ್ಲಿ ವ್ಯಕ್ತಪಡಿಸಿದ್ದಾರೆ. ''ಅಯ್ಯಾ ಎಂದರೆ ಸ್ವರ್ಗ, ಎಲ್ಲವೋ ಎಂದರೆ ನರಕ'' ಎಂದು ಹೇಳುತ್ತಾ ನಾವು ಮತ್ತೊಬ್ಬರನ್ನು ಗೌರವಯುತವಾಗಿ ಸಂಬೋಧಿಸಬೇಕು, ಅದುವೇ ನಮಗೂ ಗೌರವ ಎಂದು ವಚನದ ಮೂಲಕ ಉಪದೇಶಿಸಿದ್ದಾರೆ.

''ಹುತ್ತವ ಬಡಿದರೆ ಹಾವು ಸಾಯಬಲ್ಲದೆ? ಅಂತರಂಗ ಆತ್ಮ ಶುದ್ಧಿ ಇಲ್ಲದವರನು ಎಂತು ಮೆಚ್ಚುವನಯ್ಯ ನಮ್ಮ ಕೂಡಲಸಂಗಮದೇವ''

ಈ ವಚನದಲ್ಲಿ ಢಾಂಬಿಕ ಭಕ್ತರನ್ನು ಕಂಡು ಬಸವಣ್ಣನವರು ಎರಡನೆಯವರ ತಪ್ಪನ್ನು ಎತ್ತಿ ತೋರಿಸುತ್ತಾ, ತನ್ನ ತಪ್ಪನ್ನು ಮುಚ್ಚಿಡುವ ಮಾನವರನ್ನು ದೇವ ಮೆಚ್ಚುವುದಿಲ್ಲ, ತನ್ನ ಅಂತರಂಗ, ಆತ್ಮ ಶುದ್ಧಿ ಇಲ್ಲದವರು ಏನು ಮಾಡಿದರು ತೀರುವುದಿಲ್ಲ, ಅಂತವರನ್ನು ದೇವರು ಸಹ ಮೆಚ್ಚುವುದಿಲ್ಲ ಎಂದು ಹೇಳಿದ್ದಾರೆ. ಇದು ಜಗತ್ತಿನಲ್ಲಿರುವ ಪ್ರತಿಯೊಬ್ಬರೂ ತಮ್ಮ ಅಂತರಂಗವನ್ನು ಶುದ್ಧಿಯಾಗಿಟ್ಟುಕೊಳ್ಳಬೇಕೆಂಬ ಸ್ಪಷ್ಟ ಸಂದೇಶ ನೀಡಿದುದಾಗಿದೆ.

**ಕಳಬೇಡ, ಕೊಲಬೇಡ; ಹುಸಿಯ ನುಡಿಯಲುಬೇಡ;**
**ಮುನಿಯಬೇಡ, ಅನ್ಯರಿಗೆ ಅಸಹ್ಯ ಪಡಬೇಡ;**
**ತನ್ನ ಬಣ್ಣಿಸಬೇಡ, ಇದ ಹಳಿಯಲುಬೇಡ,**
**ಇದೆ ಅಂತರಂಗ ಶುದ್ಧಿ, ಇದೇ ಬಹಿರಂಗ ಶುದ್ಧಿ,**
**ಇದೇ ನಮ್ಮ ಕೂಡಲಸಂಗಮದೇವನೊಲಿಸುವ ಪರಿ**

ಎಂಬ ಬಸವೇಶ್ವರರ ಬೋಧನೆ ಭಾರತೀಯ ಜೀವನದ ಆದರ್ಶವಾಗಿದೆ. ಬಸವೇಶ್ವರರು ಹೇಳಿದ್ದೆಂದು ಅದಕ್ಕೆ ಗೌರವವಿದೆ ನಿಜ, ಆದರೆ ಜೀವನದ ಶ್ರೇಯಸ್ಸಿಗಾಗಿ ಅದು ಅನಿವಾರ್ಯವೆಂಬ ಕಾರಣದಿಂದ ಲೋಕ ಅದನ್ನು ಅನುಷ್ಠಾನಗೊಳಿಸುತ್ತದೆ. ಹೀಗಾಗಿ ಅದು ವಿಶ್ವ ಸತ್ಯದ ಮಟ್ಟಕ್ಕೇರುತ್ತದೆ. ಇದನ್ನೇ ಸಂಸ್ಕೃತಿಯೆಂದು ಕರೆಯುವುದು. ಅದು ಆಲೋಚನೆಗೆ ಗಹನತೆಯನ್ನೂ, ದೃಷ್ಟಿಗೆ ವಿಶಾಲತೆಯನ್ನೂ, ಭಾವನೆಗೆ ದೃಢತೆಯನ್ನೂ, ಆಚಾರ, ವಿಚಾರ, ಕ್ರಿಯೆಗಳಿಗೆ ಪ್ರೇರಣೆಯನ್ನೂ, ಜೀವನಕ್ಕೆ ಬೆಳಕನ್ನೂ ಕರುಣಿಸುತ್ತದೆ. (ಗದುಗಿನ ಭಾರತ: ಒಂದು ಸಾಂಸ್ಕೃತಿಕ ಅಧ್ಯಯನ: ಲೇ. ಡಾ. ದೇ. ಜವರೇಗೌಡ. ಪು ಸಂ–18).

**ಸರ್ವಜ್ಞ:**

ಕನ್ನಡ ನಾಡಿನ ತ್ರಿಪದಿಗಳ ಸಾರ್ವಭೌಮ ಸರ್ವಜ್ಞನು ಸುತ್ತಲಿನ ಜನಜೀವನವನ್ನು ತೆರೆದ ಕಂಗಳಿಂದ ನೋಡಿ, ಸೂಕ್ಷ್ಮ ಬುದ್ಧಿಯಿಂದ ಪರೀಕ್ಷಿಸಿ, ಅದರಿಂದ ಕಂಡುಂಡ ಅಪಾರ ಅನುಭವ, ವಿವೇಕವನ್ನು ಕೇವಲ ಮೂರು ಸಾಲುಗಳಲ್ಲಿ ಮನೋಹರವಾಗಿ ಚಿತ್ರಿಸಿ ಮಾನವರ ಬದುಕಿಗೆ ಮಾರ್ಗದರ್ಶನ ನೀಡುವ ಶ್ರೇಷ್ಠ ಸಾಹಿತ್ಯವನ್ನಾಗಿ ನಿರ್ಮಿಸಿಕೊಟ್ಟಿದ್ದಾನೆ.

**ನಡೆವುದೊಂದೇ ಭೂಮಿ ಕುಡಿವುದೊಂದೇ ನೀರು,**
**ಸುಡುವಗ್ನಿ ಯೊಂದೇ ಇರುತಿರಲು ಕುಲಗೋತ್ರ**
**ನಡುವೆ ಯೆತ್ತಣದು ಸರ್ವಜ್ಞ**

ಮಾನವ ಮಾನವರಲ್ಲಿ ಭೇದ ಮಾಡದೆ ಎಲ್ಲ ಮಾನವರು ಒಂದೇ ಎನ್ನುತ್ತಾ, ಅವರೆಲ್ಲರೂ ವಾಸಿಸುವ ಭೂಮಿ ಒಂದೇ, ಎಲ್ಲರ ದಾಹ ತಣಿಸುವ ನೀರು ಒಂದೇ, ಕೊನೆಯಲ್ಲಿ ಸುಡುವ ಬೆಂಕಿಯು ಒಂದೇ, ಹೀಗಿರುವಾಗ ನಮ್ಮ ನಡುವೆ ಜಾತಿ, ಗೋತ್ರ, ಮೇಲು, ಕೀಳು, ಶ್ರೇಷ್ಠ, ಕನಿಷ್ಠಗಳೆಂದು ಭಾವಿಸುವ ಹೀನಹೃದಯ ನಮ್ಮಲ್ಲಿರಬಾರದು. ಎಲ್ಲರೂ ಒಂದೇ ಎಂಬ ವಿಶ್ವಬಂಧು ಸಂದೇಶವನ್ನು ಸರ್ವಜ್ಞ ಸಾರಿದ್ದಾನೆ.

**ಜ್ಞಾನದಿಂ ಮೇಲಿಲ್ಲ ಶ್ವಾನನಿಂ ಕೀಳಿಲ್ಲ**
**ಭಾನುವಿಂದಧಿಕವಿಲ್ಲ, ಜಗದೊಳಗೆ**
**ಜ್ಞಾನವೇ ಮಿಗಿಲು ಸರ್ವಜ್ಞ**

ಎಂಬ ವಚನದಲ್ಲಿ ಮಾನವರಿಗೆ ಎಲ್ಲಕ್ಕಿಂತಲೂ ಮಿಗಿಲು ಜ್ಞಾನ ಎಂದು ಹೇಳುತ್ತಾ, ಜ್ಞಾನ ಇಲ್ಲದವನು ನಾಯಿಗಿಂತ ಕೀಳಾಗಿರುವನು, ಬೆಳಕಿಗೆ ನಿರ್ದಿಷ್ಟ ವ್ಯಾಪ್ತಿ ಇಲ್ಲ ಅದು ಅನಂತ, ಬಾನಿನ ತುಂಬಾ ಬೆಳಕು ಬೆಳೆದಿರುವುದು ಅದಕ್ಕೆ ಆದಿ ಅಂತ್ಯಗಳಿಲ್ಲ, ಜಗತ್ತಿನಲ್ಲಿ ಜ್ಞಾನವು ಹಾಗೆ ಎಂದು ಜ್ಞಾನದ ಮಹತ್ವ ತಿಳಿಸುತ್ತಾನೆ.

**ಕೋಟಿ ವಿದ್ಯೆಗಳಲ್ಲಿ ಟಮೇಟಿ ವಿದ್ಯೆಯೆ ಮೇಲು**
**ಮೇಟಿಯಿಂ ರಾಟಿ ನಡೆದುದಲ್ಲದೆ ದೇಶ**
**ದಾಟವೇ ಕೆಡುಗು ಸರ್ವಜ್ಞ**

ಕೆಲವೊಂದು ದೇಶಗಳು ಕೆಲವೊಂದು ಉದ್ಯೋಗಗಳನ್ನು ತಮ್ಮ ಪರಿಸ್ಥಿತಿಗೆ ಅನುಸಾರವಾಗಿ ನಿರ್ಮಿಸಿಕೊಂಡಿರುತ್ತವೆ. ಆದರೆ ನಮ್ಮ ಭಾರತ ದೇಶದಲ್ಲಿ ಮುಕ್ಕಾಲು ಪಾಲು ಜನರು ಕೃಷಿಯನ್ನು ಅವಲಂಬಿಸಿದ್ದಾರೆ. ಹಾಗಾಗಿ ಕೃಷಿಕರ್ಮ ಶಿಕ್ಷಣವೇ ನಮ್ಮ ರಾಷ್ಟ್ರವನ್ನು ಉನ್ನತ ಸ್ಥಿತಿಗೆ ತರಬಲ್ಲದು ಎಂಬುದು ಸರ್ವಜ್ಞನ ಅಭಿಮತವಾಗಿದೆ.

**ಮಹಾಕವಿ ಕುವೆಂಪು:**

**''ಜೈ ಭಾರತ ಜನನಿಯ ತನುಜಾತೆ**
**ಜಯ ಹೇ ಕರ್ನಾಟಕ ಮಾತೆ''.....**

ಎಂಬ ಕುವೆಂಪುರವರ ಕವನವು ಕರ್ನಾಟಕದ ನಾಡಗೀತೆಯಾಗಿದ್ದು, ಇದರಲ್ಲಿ ಕರ್ನಾಟಕ ಮಾತೆಯನ್ನು ಭಾರತಮಾತೆಯ ಮಗಳೆಂದು ಸಂಬೋಧಿಸಿ ಬರೆದಿರುವಲ್ಲಿ ನಾಡಪ್ರಜ್ಞೆ ಜೊತೆಗೆ ರಾಷ್ಟ್ರೀಯ ಪ್ರಜ್ಞೆ ಬಹಳ ಸೂಕ್ತವಾಗಿ ಮೂಡಿಬಂದಿದೆ.

**ಕಿಚ್ಚಿಟ್ಟು ಹಳೆ ಕೊಳಕು ಬಣಗು ತೃಣಕೆ**
**ಓ ಬನ್ನಿ ಸೋದರರೇ ರಾಷ್ಟ್ರ ರಣಕೆ. !**
**ಸಿಲುಕದಿರಿ ಭಾರತವೆಂಬ ಮೋಹದಜ್ಞಾನಕ್ಕೆ;**
**ಮತಿಯಿಂದ ದುಡಿಯಿರೈ ಲೋಕಹಿತಕೆ.**
**ಆ ಮತದ ಈ ಮತದ ಹಳೆ ಮತದ ಸಹವಾಸ**
**ಸಾಕಿನ್ನು ಸೇರಿರೈ ಮನುಜ ಮತಕೆ**

**ಓ, ಬನ್ನಿ ,ಸೋದರರೇ ವಿಶ್ವ ಪಥಕೆ..**

**(ಓ,ಬನ್ನಿ ,ಸೋದರರೇ, ಬೇಗ ಬನ್ನಿ!-ಕುವೆಂಪು)**

ಕರ್ನಾಟಕ ಕಂಡ ಅಪರೂಪದ ಕವಿಗಳಲ್ಲಿ ಕುವೆಂಪುರವರು ಒಬ್ಬರು. ಅವರು ಬರೆದಿರುವುದು ಕನ್ನಡ ಭಾಷೆಯಲ್ಲಾದರೂ ಅವರ ಸಾಹಿತ್ಯ ಭಾರತಕಷ್ಟೇ ಅಲ್ಲದೆ ವಿಶ್ವ ಸಾಹಿತ್ಯಕ್ಕೆ ಶ್ರೇಷ್ಟ ಕೊಡುಗೆಯಾಗಿದೆ. ಜನರು ಆ ಮತ ಈ ಮತವೆಂದು ಅಂಟಿಕೊಳ್ಳದೆ ಮನುಜ ಮತಕ್ಕೆ ಸೇರಬೇಕು, ಅದು ವಿಶ್ವಕ್ಕೆ ದಾರಿಯಾಗಬೇಕು, ಮಾದರಿಯಾಗಬೇಕು ಎಂದು ಸಾಮಾನ್ಯ ಮಾನವನನ್ನು ಮಹಾಮಾನವ ಅಥವಾ ವಿಶ್ವಮಾನವನನ್ನಾಗಿ ಮಾಡಿದ ಕೀರ್ತಿ ಮಹಾಕವಿ ಕುವೆಂಪುರವರಿಗೆ ಸಲ್ಲುತ್ತದೆ. ಆದುದರಿಂದಲೇ ಕುವೆಂಪುರವರು ಹುಟ್ಟಿದ ದಿನವನ್ನು ವಿಶ್ವಮಾನವ ದಿನಾಚರಣೆ ಎಂದು ಪ್ರತಿ ವರ್ಷ ಆಚರಿಸಲಾಗುತ್ತಿದೆ.

ನಡೆ ಮುಂದೆ ನಡೆ ಮುಂದೆ ನುಗ್ಗಿ ನಡೆ ಮುಂದೆ, ಜಗ್ಗದೆಯೆ ಕುಗ್ಗದೆಯೆ ಹಿಗ್ಗಿ ನಡೆ ಮುಂದೆ..

ಎಂಬ ಕವನದಲ್ಲಿ ಮುಂದುವರಿಯುತ್ತಾ "ನಾನಳಿವೆ ನೀನಳಿವೆ, ನಮ್ಮೆಲುಬುಗಳ ಮೇಲೆ ಮೂಡುವುದು ಮೂಡುವುದು ನವ ಭಾರತದ ಲೀಲೆ" ಎನ್ನುತ್ತಾ, ಭರತ ಖಂಡದ ಹಿತವೆ ನನ್ನ ಹಿತ ಎಂದು, ಭರತಮಾತೆಯ ಮತವೆ ನನ್ನ ಮತ ಎಂದು, ಭಾರತಾಂಬೆಯ ಸುತರೆ ಸೋದರರು ಎಂದು, ಭಾರತಾಂಬೆಯ ಮುಕ್ತಿ, ಮುಕ್ತಿ ನನಗದೆಂದು....ಕೊನೆಯಲ್ಲಿ

**ಆತ್ಮವಚ್ಯುತವೆಂದು ಜನ್ಮಗಳು ಬೇಡವೆಂದು**
**ಮೃತ್ಯು ನಶ್ವರವೆಂದು ಭಾರತಿಗೆ ಜಯ ಎಂದು**
**ನಡೆ ಮುಂದೆ ನಡೆ ಮುಂದೆ**

**(ಕುವೆಂಪು –ಪಾಂಚಜನ್ಯ )**

ಎಂದು ಕವನದಲ್ಲಿ ಭಾರತ ಸ್ವಾತಂತ್ರ್ಯಪೂರ್ವದಲ್ಲಿ ಸ್ವಾತಂತ್ರ್ಯ ಹೋರಾಟಕ್ಕೆ ಯುವಕರಲ್ಲಿ ಉತ್ಸಾಹ ತುಂಬುವ ಪ್ರೇರಕ ಶಕ್ತಿಯಾಗಿ, ಯುವಕರನ್ನು ಕೆಚ್ಚೆದೆಯ ಕಲಿಗಳಾಗುವಂತೆ ಪ್ರೇರೇಪಿಸಿದ್ದು, ರಾಷ್ಟ್ರೀಯತೆ ಬಗ್ಗೆ ಕುವೆಂಪುರವರ ಕಳಕಳಿ ಕಂಡುಬರುತ್ತದೆ. ಇಲ್ಲಿ ವ್ಯಕ್ತಿಗಿಂತ ದೇಶ ಮುಖ್ಯ, ನಾವು ಅಳಿದು ಹೋಗುತ್ತೇವೆ ಎಂದು ಕೊರಗದೆ, ಹೋರಾಡಿದರೆ ಸ್ವತಂತ್ರವಾದ ಮೇಲೆ ನಮ್ಮ ಎಲುವುಗಳ ಮೇಲೆ ನವಭಾರತದ ಲೀಲೆ ಮೂಡುತ್ತದೆ. ಭಾರತಮಾತೆಯ ಹಿತವೇ ನಮ್ಮ ಹಿತವೆಂದು, ಭಾರತಾಂಬೆಯ ಮುಕ್ತಿಯೇ ನಮಗೆ ಮುಕ್ತಿ ಎಂದು ಹೋರಾಟಕ್ಕೆ ಮುಂದಾಗಬೇಕು ಎಂದು ಕವನದ ಮೂಲಕ ಕರೆ ಕೊಟ್ಟಿದ್ದಾರೆ. (ಈ ಕವನಕ್ಕೆ ಪ್ರೇರಣೆಯೆಂದರೆ ಭಾರತದ ಮಹಾನ್ ಕ್ರಾಂತಿಕಾರಿ ಸ್ವಾತಂತ್ರ್ಯ ಹೋರಾಟಗಾರ ಜತೀಂದ್ರನಾಥರು ಬ್ರಿಟೀಷರ ಸೆರೆಯಲ್ಲಿ ಮರಣವನ್ನಪ್ಪಿದಾಗ ಕುವೆಂಪುರವರು ಯುವಜನರನ್ನು ಹೋರಾಟಕ್ಕೆ ಪ್ರೇರೇಪಿಸಲು ಈ ಕವಿತೆಯನ್ನು ರಚಿಸಿದರೆಂದು ಹೇಳಲಾಗಿದೆ.)

**ನೂರು ದೇವರನೆಲ್ಲ ನೂಕಾಚೆ ದೂರ**
**ಭಾರತಾಂಬೆಯೆ ದೇವಿ ನಮಗಿಂದು ಪೂಜಿಸುವ ಬಾರ!**
**ಎಂಬ ಪಲ್ಲವಿಯೊಂದಿಗೆ ಪದ್ಯ ಮುಂದುವರಿಯುತ್ತಾ**
**ಭಾರತೀಯೆ ನಮಗಿಂದು ಜೀವನದ ದೇವತೆಯು,**
**ವಿಶ್ವರೂಪಿಣಿಯವಳು, ವಿಶ್ವಮುಖಿಯೈ!**
**ನಮ್ಮೆಲ್ಲರಂಗಗಳೆ ನಮ್ಮಂಬೆಯಂಗವೈ,**
**ನಮ್ಮ ಸ್ವಾತಂತ್ರ್ಯದೊಳೇ ನಮ್ಮಮ್ಮ ಸುಖಿಯೈ!**

**("ಇಂದಿನ ದೇವರು") – ಕುವೆಂಪು**

ಹೀಗೆ ನಾವೆಲ್ಲರೂ ನಮ್ಮ ನಮ್ಮ ಜಾತಿ, ಮತಗಳಿಗೊಂದು ದೇವರನ್ನು ಮಾಡಿಕೊಂಡು

ಪೂಜಿಸುವುದಕ್ಕಿಂತ, ನಮ್ಮ ರಾಷ್ಟ್ರಮಾತೆಯಾದ ಭಾರತಾಂಬೆಯನ್ನು ಪೂಜಿಸಬೇಕು, ಪೋಷಿಸಬೇಕು, ವಿಶ್ವಕ್ಕೆ ಮುಖ ಮಾಡಿರುವ ವಿಶ್ವರೂಪಿಣಿಯಾಗಿರುವ ಭಾರತಮಾತೆ ನಮಗೆ ಮುಖ್ಯ. ನಮ್ಮ ಅಂಗಗಳು ಭಾರತಮಾತೆಯ ಅಂಗಗಳೇ, ನಮಗೆ ಪರಮ ಸುಖ ಎನ್ನುವುದು ನಮ್ಮ ಸ್ವಾತಂತ್ರ್ಯದಲ್ಲಿಯೇ ಇದೆ ಎಂದು ಕುವೆಂಪುರವರು ನಮ್ಮ ದೇಶ ಸ್ವಾತಂತ್ರ್ಯಕ್ಕೆ ಹಂಬಲಿಸುತ್ತಿರುವಾಗ ಹೇಳಿರುವ ಮಾತಾಗಿದೆ. ಕನ್ನಡದ ಹೆಮ್ಮೆಯ ರಾಷ್ಟ್ರಕವಿ ಕುವೆಂಪುರವರ ಮಾತೃಭಾಷಾ ಪ್ರೇಮವನ್ನು ಅವರ ಮತ್ತೊಂದು ಕವಿತೆಯಲ್ಲಿ ನೋಡಬಹುದಾಗಿದೆ.

**ಎಲ್ಲಾದರೂ ಇರು ಎಂತಾದರೂ ಇರು;**
**ಎಂದೆಂದಿಗೂ ನೀ ಕನ್ನಡವಾಗಿರು.**
**ಕನ್ನಡ ಗೋವಿನ ಓ ಮುದ್ದಿನ ಕರು,**
**ಕನ್ನಡತನವೊಂದಿದ್ದರೆ ನೀನೊಮ್ಮೆ ಕಲ್ಪತರು!...**
**ಎಲ್ಲಿದ್ದಾರೆ ಏನ್ ಎಂದಿದ್ದಾರೆ ಏನ್?**
**ಎಂದೆಂದಿಗೂ ತಾನ್–**
**ಕನ್ನಡವೇ ಸತ್ಯ!**
**ಕನ್ನಡವೇ ನಿತ್ಯ!**
**ಅನ್ಯವೆನಲದೆ ಮಿಥ್ಯಾ!**

**(ಮೆಟ್ಟುವ ನೆಲ ಕರ್ನಾಟಕ)**

ಈ ಕವಿತೆಯಲ್ಲಿ ಕನ್ನಡಿಗರಾದವರು ತಮ್ಮ ಹೊಟ್ಟೆ ಹೊರೆಯಲು ಎಲ್ಲಿಗಾದರೂ ಹೋಗಲಿ, ಏನಾದರೂ ವೃತ್ತಿ ಮಾಡಲಿ, ಹೇಗಾದರೂ ಬದುಕಲಿ ಆದರೆ ಮಾತೃಭಾಷೆಯಾದ ಕನ್ನಡವನ್ನು ಎಂದೆಂದಿಗೂ ಮರೆಯಬಾರದು, ಅದು ಯಾವತ್ತಿಗೂ ಸತ್ಯ, ಸರ್ವಕಾಲಕ್ಕೂ ನಿತ್ಯ ಎನ್ನುವಂತೆ ಅಪ್ಪಟ ಅಭಿಮಾನಿಯಾಗಿ ಕವಿತೆಯಲ್ಲಿ ಕಟ್ಟಿಕೊಡುತ್ತಾರೆ.

**ಚನ್ನವೀರ ಕಣವಿ:**

**ವಿಶ್ವ ವಿನೂತನ ವಿದ್ಯಾ ಚೇತನ ಸರ್ವ ಹೃದಯ ಸಂಸ್ಕಾರಿ**
**ಜಯ ಭಾರತಿ, ಕರುನಾಡ ಸರಸ್ವತಿ...**
**ಎಂದು ಮುಂದುವರಿಯುವ ಕವಿತೆ ಕೊನೆಯ ಚರಣದಲ್ಲಿ–**
**ಅರಿವೇ ಗುರು ನುಡಿ ಜ್ಯೋತಿರ್ಲಿಂಗ**
**ದಯವೇ ಧರ್ಮದ ಮೂಲ ತರಂಗ**
**ವಿಶ್ವಭಾರತಿಗೆ ಕನ್ನಡದಾರತಿ! ಮೊಳಗಲಿ ಮಂಗಲ ಜಯಭೇರಿ!**

**(ವಿಶ್ವ ಭಾರತಿಗೆ ಕನ್ನಡದಾರತಿ)– ಚನ್ನವೀರ ಕಣವಿ**

ಚಂಬೆಳಕಿನ ಕವಿ ಚನ್ನವೀರ ಕಣವಿಯವರು ತಮ್ಮ ಕವಿತೆಯಲ್ಲಿ ಕನ್ನಡ ನಾಡಿನ ಹಿರಿಮೆಯನ್ನು, ಪ್ರಕೃತಿ ಸೌಂದರ್ಯವನ್ನು, ಸರ್ವರಿಗೂ ವಿದ್ಯೆಯ ಅಧಿದೇವತೆಯಾದ (ಕರುನಾಡ) ಸರಸ್ವತಿಯನ್ನು ಮೊದಲುಗೊಂಡು ಭಾರತ ಮಾತೆಗೆ ಜಯವಾಗಲಿ ಎಂದು ನಾಡಗೀತೆಗೂ ಸೈ ಹಾಗೂ ದೇಶಭಕ್ತಿ ಗೀತೆಯಾಗಿಯೂ ಸೈ ಎನ್ನುವ ರೀತಿಯಲ್ಲಿ ಭಾರತಾಂಬೆಗೆ ಗೌರವ ಸೂಚಿಸಿದ್ದಾರೆ. ಹೀಗೆ ಕವಿತೆಯನ್ನು ಮುಂದುವರಿಸುತ್ತಾ ಕೊನೆಯ ಚರಣದಲ್ಲಿ ಮಾನವನಿಗೆ ಅರಿವು ಮುಖ್ಯ, ಅದುವೇ ಅವನಿಗೆ ಗುರುವಾಗಿರಬೇಕು. ಆವಾಗ ಅವನಾಡುವ ನುಡಿಗಳೆಲ್ಲವೂ ಜ್ಯೋತಿರ್ಲಿಂಗಕ್ಕೆ ಸಮಾನವಾಗಿರುತ್ತವೆ. ಇಂತಿರುವ ಜನರಲ್ಲಿ ಧರ್ಮದ ಮೂಲವಾಗಿ ದಯೆ ತುಂಬಿರುತ್ತದೆ. ಹೀಗಿರುವ ಕನ್ನಡಿಗರು ವಿಶ್ವ ಪ್ರತೀಕವಾದ ಭಾರತಮಾತೆಗೆ ಆರತಿ ಬೆಳಗುವರು. ಇಂತಹ ಮಂಗಲಕರವಾದ ಜಯಭೇರಿಯು ಪ್ರಪಂಚದ ದಿಕ್ಕು ದಿಕ್ಕುಗಳಿಗೂ ಹರಡಲಿ ಎಂದು ಕವಿ ಆಶಿಸುತ್ತಾರೆ.

**ಸಮಾರೋಪ:**

ಕನ್ನಡ ಕವಿಗಳ ಹೃದಯ ಶ್ರೀಮಂತಿಕೆ, ವೈಶಾಲ್ಯತೆಗೆ ಮೇರೆಯೇ ಇಲ್ಲ. ನಾಡು, ನಾಡಿನ ಜನರ ಬದುಕಿನ ವೈಶಿಷ್ಟ್ಯ ಅನುಕರಣೆಯವಾದುದು. ದೇವನ ಮನೆಯ ಕವಿ ಎಂದು ಹೆಸರಾದ ಬ. ಗಿ. ಯಲ್ಲಟ್ಟಿಯವರು ಹೇಳುವಂತೆ, "ದೇವನ ಮನೆ ಇದು ಈ ಜಗವೆಲ್ಲ ಬಾಡಿಗೆದಾರರು ಜೀವಿಗಳೆಲ್ಲ." ಈ ಭೂಮಿಯಲ್ಲಿ ಮಾನವರು ಅತಿಥಿಗಳು, ಶಾಶ್ವತವಾಗಿ ಇಲ್ಲಿ ಯಾರೂ ಇರಲಾಗದು ಎಂಬ ಅರಿವಿನಿಂದ ಬಾಳಬೇಕಾಗಿರುತ್ತದೆ. ಇಂತಹ ಮಾನವರು ಸಹಿಷ್ಣುತಾ ಮನೋಭಾವನೆಯನ್ನು ಹೊಂದಿರಬೇಕು. ಹಾಗೂ ಈಶ್ವರ ಸಣಕಲ್ಲರ ಕೋರಿಕೆ ಕವನದಲ್ಲಿನ "ಜಗವೆಲ್ಲ ನಗುತಿರಲಿ ಜಗದಳವು ನನಗಿರಲಿ" ಎಂಬ ಸಾಲನ್ನು ನೋಡಿದಾಗ ನಾವು ನಮ್ಮ ದೇಶ ಎಂಬ ಸಂಕುಚಿತ ಭಾವನೆಯಿಂದ ಹೊರಬಂದು ನಮ್ಮ ಮನಸ್ಸನ್ನು ವಿಶಾಲಗೊಳಿಸಿಕೊಳ್ಳಬೇಕು. ಇಡೀ ಜಗತ್ತೇ ನಮ್ಮ ಮನೆಯಾಗಬೇಕು. ಜಗತ್ತಿನ ಜನರೆಲ್ಲರೂ ಸುಖವಾಗಿರಬೇಕು. ಅವರ ಸುಖ–ಸಂತೋಷದಲ್ಲಿ ತನ್ನ ನೋವು–ಸಂಕಟಗಳನ್ನು ಮರೆತು ತಾನು ಸಂತಸ ಪಡಬೇಕು. ಅದುವೇ ಅತ್ಯುತ್ತಮ ಜೀವನದ ಮರ್ಮವಾಗಬೇಕು ಎಂದು ಭಾವಿಸಿರುವ ಕನ್ನಡ ನಾಡಿನ ಕವಿ ಮನಸ್ಸು ವಿಶ್ವ ಸಾಹಿತ್ಯಕ್ಕೆ ನೀಡಿದ ಕೊಡುಗೆಯಾಗಿದೆ.

**ಪರಾಮರ್ಶನ ಗ್ರಂಥಗಳು:**


1. ಮರುಳಸಿದ್ದಪ್ಪ ಕೆ, ನಾಗರಾಜ ಕಿ. ರಂ., (1979), ಸಂಪಾದಕರು. ವಚನ ಕಮ್ಮಟ – (ಪ್ರಿಂಟೆಕ್ ಪ್ರಿಂಟರ್ಸ್, ಬೆಂಗಳೂರು)
2. ಕೇಶವ ಭಟ್ಟ. ಎಂ. (2006), ಸಂಪಾದಕರು, ನಾಡೋಜ ಪಂಪ: (ಮುಳಿಯ ತಿಮ್ಮಪ್ಪಯ್ಯ ). (ಮಯೂರ ಪ್ರಿಂಟ್ ಆಡ್ಸ್, ಬೆಂಗಳೂರು)
3. ಬಸವರಾಜು ಎಲ್ (2003), ಪಂಪನ ಆದಿಪುರಾಣ ಕಥಾಮೃತ: (ಗೀರಾ ಬುಕ್ ಹೌಸ್, ಮೈಸೂರು)
4. ಕುವೆಂಪು. (1933), ಪಾಂಚಜನ್ಯ. ಉದಯ ರವಿ ಪ್ರಕಾಶನ, ಮೈಸೂರು
5. ಶ್ರೀ ಉತ್ತಂಗಿ ಚನ್ನಪ್ಪ., (1999), ಸರ್ವಜ್ಞನ ವಚನಗಳು ಸಂಪಾದಕರು. ಪ್ರಕಾಶ ಸಾಹಿತ್ಯ, ಬೆಂಗಳೂರು
6. ಶೇಷಗಿರಿರಾವ್ ಎಲ್. ಎಸ್., ಡಾ. ಚಿದಾನಂದಮೂರ್ತಿ ಎಂ., ಚಂದ್ರಶೇಖರ ರಾ. ನಂ., ಕನ್ನಡ ಕನ್ನಡಿಗ ಕರ್ನಾಟಕ



**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.



**About the License:**

© The Authors 2024. The text of this article is open access and licensed under a Creative Commons Attribution 4.0 International License.